ಪ್ರಜಾವಾಣಿ

# ಜೈನ್ ವಿವಿ ಕ್ಯಾಂಪಸ್‌ನಲ್ಲಿ 'ಅಗ್ನಿ ಪರೀಕ್ಷಾ ಪ್ರಯೋಗಾಲಯ' ಪ್ರಾರಂಭ

**ಬೆಂಗಳೂರು:** 'ನಗರದ ಜೈನ್ ವಿ.ವಿ ಕ್ಯಾಂಪಸ್‌ನಲ್ಲಿ ಅಗ್ನಿ ಪರೀಕ್ಷಾ ಪ್ರಯೋಗಾಲಯ ನಿರ್ಮಿಸಲಾಗಿದ್ದು, ಗುರುವಾರ ಉದ್ಘಾಟನೆಯಾಗಲಿದೆ' ಎಂದು ಯುಎಲ್ ದಕ್ಷಿಣ ಏಷ್ಯಾ ಉಪಾಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸುರೇಶ್ ಸುಗವನಂ ಹೇಳಿದರು.

ಬುಧವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, 'ಈ ಪ್ರಯೋಗಾಲಯ ಅಗ್ನಿ ಸುರಕ್ಷತೆಗೆ ಸಂಬಂಧಿಸಿದಂತೆ ಶೈಕ್ಷಣಿಕ ಕಾರ್ಯಕ್ರಮಗಳು, ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸಲಿದೆ' ಎಂದರು.

ಜೆಜಿಐ ಸಮೂಹದ ಸಂಸ್ಥಾಪಕ ಡಾ. ಚೆನ್‌ರಾಜ್ ರಾಯ್‌ಚಂದ್, '2,400 ಚದರ ಅಡಿ ವಿಸ್ತೀರ್ಣದಲ್ಲಿ ₹15 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಈ ಪ್ರಯೋಗಾಲಯದಲ್ಲಿ  ಅಗ್ನಿ ಉಪಕರಣಗಳ ಪರೀಕ್ಷೆ, ಗುಣಮಟ್ಟ ನಿರ್ಧರಿಸುವುದು ಮತ್ತು ಪ್ರಮಾಣೀಕರಿಸುವ ಕಾರ್ಯ ನಡೆಯಲಿದೆ' ಎಂದು ತಿಳಿಸಿದರು.

ತಾಂತ್ರಿಕ ಪಾಲುದಾರರಾಗಿರುವ ಯುಎಲ್ ಕೈಗಾರಿಕೆ ತರಬೇತಿ, ಉಪಕರಣ ಮತ್ತು ಪರೀಕ್ಷಿಸಿದ ಉತ್ಪನ್ನಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಂಗೀಕಾರ ನೀಡುವ ಕೆಲಸ ಮಾಡುತ್ತದೆ.